# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1177 |
| ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 15.12.2023 |
| ಉತ್ತರಿಸಬೇಕಾದ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ "ನೈಸರ್ಗಿಕ ಕೃಷಿ" ಪ್ರಯೋಗ ಯಾವ ಹಂತದಲ್ಲಿದೆ: | 2018-19 ನೇ ಸಾಲಿನ ಕಾರ್ಯಕ್ರಮವಾದ ನೈಸರ್ಗಿಕ ಕೃಷಿ ಯೋಜನೆಯಡಿ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಪದ್ಧತಿಯ ವೈಜ್ಞಾನಿಕ ಮೌಲ್ಯೀಕರಣವನ್ನು ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳ ಮುಖಾಂತರ ರಾಜ್ಯದ ಎಲ್ಲಾ 10 ಹವಾಮಾನ ವಲಯಗಳ ಸಂಶೋಧನಾ ಕೇಂದ್ರಗಳಲ್ಲಿ Operational Research Project (ORP) ಮಾದರಿಯಲ್ಲಿ ಪ್ರಾಯೋಗಿಕ ಪ್ರಯೋಗಗಳನ್ನು ಕೈಗೊಳ್ಳಲಾಗಿದ್ದು, ಪ್ರಯೋಗಗಳು ಮುಕ್ತಾಯಗೊಂಡಿರುತ್ತದೆ ಹಾಗೂ ಪ್ರಾಯೋಗಿಕ ಪ್ರಯೋಗಗಳ ಶಿಫಾರಸ್ಸುಗಳನ್ನು ಅನುಬಂಧದಲ್ಲಿ ನೀಡಲಾಗಿರುತ್ತದೆ. |
| ಆ) | ಎಷ್ಟು ವಿಸ್ತೀರ್ಣದ ಕೃಷಿ ಭೂಮಿಯನ್ನು ಇದುವರೆಗೆ "ನೈಸರ್ಗಿಕ ಕೃಷಿ" ಪದ್ಧತಿಗೆ ಒಳಪಡಿಸಲಾಗಿದೆ: | 2018-19 ನೇ ಸಾಲಿನ ನೈಸರ್ಗಿಕ ಕೃಷಿ ಯೋಜನೆಯಡಿ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳ ಸಂಶೋಧನಾ ಕೇಂದ್ರಗಳಲ್ಲಿ ಪ್ರಯೋಗಗಳನ್ನು ಕೈಗೊಳ್ಳಲಾಗಿರುತ್ತದೆ.<br><br>2022-23 ನೇ ಸಾಲಿನಲ್ಲಿ ರಾಜ್ಯದ ಐದು ಕೃಷಿ/ತೋಟಗಾರಿಕಾ ವಿಶ್ವವಿದ್ಯಾಲಯಗಳ ಮೂಲಕ "ಮುಖ್ಯಮಂತ್ರಿಗಳ ನೈಸರ್ಗಿಕ ಕೃಷಿ" ಯೋಜನೆಯಡಿ ಪ್ರತಿ ಕೃಷಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯ 1000 ಎಕರೆಯಂತೆ ಒಟ್ಟು 5000 ಎಕರೆ ರೈತರ ಕ್ಷೇತ್ರಗಳಲ್ಲಿ ನೈಸರ್ಗಿಕ ಕೃಷಿ ಪದ್ಧತಿಯಡಿ ಪ್ರಾಯೋಗಿಕ ಪ್ರಯೋಗಗಳನ್ನು ಕೈಗೊಳ್ಳಲಾಗಿರುತ್ತದೆ. |

.......2

| | | |
|---|---|---|
| ಇ) | ರಾಜ್ಯದಲ್ಲಿ"ನೈಸರ್ಗಿಕ ಕೃಷಿ" ಯನ್ನು ಕೈಗೊಳ್ಳುವಂತೆ ರೈತರನ್ನು ಪ್ರೇರೇಪಿಸಲು ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳೇನು: | 2018-19 ನೇ ಸಾಲಿನ ನೈಸರ್ಗಿಕ ಕೃಷಿ ಯೋಜನೆಯಡಿ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಪದ್ಧತಿಯ ವೈಜ್ಞಾನಿಕ ಮೌಲ್ಯೀಕರಣವನ್ನು ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳ ಮುಖಾಂತರ ರಾಜ್ಯದ ಎಲ್ಲಾ 10 ಹವಾಮಾನ ವಲಯಗಳ ಸಂಶೋಧನಾ ಕೇಂದ್ರಗಳಲ್ಲಿ ಹಾಗೂ ಆಯ್ದ ರೈತರ ತಾಕುಗಳಲ್ಲಿ Operational Research Project (ORP) ಮಾದರಿಯಲ್ಲಿ ಪ್ರಾಯೋಗಿಕ ಪ್ರಯೋಗಗಳನ್ನು ಕೈಗೊಳ್ಳಲಾಗಿದ್ದು, ಪ್ರಯೋಗಗಳು ಮುಕ್ತಾಯ ಗೊಂಡಿರುತ್ತವೆ.<br><br>2022-23 ನೇ ಸಾಲಿನಲ್ಲಿ ರಾಜ್ಯದ ಕೃಷಿ/ತೋಟಗಾರಿಕಾ ವಿಶ್ವವಿದ್ಯಾಲಯಗಳ ಮೂಲಕ "ಮುಖ್ಯಮಂತ್ರಿಗಳ ನೈಸರ್ಗಿಕ ಕೃಷಿ" ಯೋಜನೆಯಡಿ ಪ್ರಾಯೋಗಿಕ ಪ್ರಯೋಗಗಳನ್ನು ಪ್ರತಿ ಕೃಷಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯ 1000 ಎಕರೆ ರೈತರ ಕ್ಷೇತ್ರಗಳಲ್ಲಿ ಕೈಗೊಳ್ಳಲಾಗಿರುತ್ತದೆ. ಯೋಜನೆಯಡಿ ಆಯ್ಕೆಯಾದ ಕ್ಲಸ್ಟರ್ ಗಳಲ್ಲಿನ ರೈತರಿಗೆ ತರಬೇತಿ ನೀಡಲಾಗಿದ್ದು, ಯೋಜನಾ ಪ್ರದೇಶದ ರೈತರಿಗೆ ಪ್ರತಿ ಎಕರೆಗೆ ರೂ. 7000/- ಗಳನ್ನು ಪಾವತಿಸಲಾಗಿರುತ್ತದೆ.<br><br>ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯ ವತಿಯಿಂದ "National Mission on Natural Farming" ಎಂಬ ಹೊಸ ಯೋಜನೆಯನ್ನು ಘೋಷಿಸಲಾಗಿದ್ದು, ಯೋಜನೆಯು ಪ್ರಮುಖವಾಗಿ knowledge intensive programme ಆಗಿರುತ್ತದೆ. ಯೋಜನಾ ಪ್ರದೇಶದ ರೈತರನ್ನು ನೈಸರ್ಗಿಕ ಕೃಷಿಯ ವ್ಯಾಪ್ತಿಗೆ ತರುವುದು ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಸದರಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಬಜೆಟ್ ಹಂಚಿಕೆ ಮತ್ತು ಪರಿಷ್ಕೃತ ಅನುಷ್ಠಾನ ಮಾರ್ಗಸೂಚಿಗಳು ನಿರೀಕ್ಷಣೆ ಯಲ್ಲಿರುತ್ತದೆ. |

........3

| | | |
|---|---|---|
| ಈ) | "ನೈಸರ್ಗಿಕ ಕೃಷಿ" ಕೈಗೊಳ್ಳುತ್ತಿರುವ ರೈತರಿಗೆ ಸರ್ಕಾರದಿಂದ ದೊರೆಯುತ್ತಿರುವ ನೆರವು ಮತ್ತು ಸೌಲಭ್ಯಗಳು ಯಾವುವು: | 2022-23 ನೇ ಸಾಲಿನಲ್ಲಿ ರಾಜ್ಯದ ಕೃಷಿ / ತೋಟಗಾರಿಕಾ ವಿಶ್ವವಿದ್ಯಾಲಯಗಳ ಮೂಲಕ "ಮುಖ್ಯಮಂತ್ರಿಗಳ ನೈಸರ್ಗಿಕ ಕೃಷಿ" ಯೋಜನೆಯಡಿ ಪ್ರಾಯೋಗಿಕ ಪ್ರಯೋಗಗಳನ್ನು ಪ್ರತಿ ಕೃಷಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯ 1000 ಎಕರೆ ರೈತರ ಕ್ಷೇತ್ರಗಳಲ್ಲಿ ಕೈಗೊಳ್ಳಲಾಗಿರುತ್ತದೆ. ಯೋಜನೆಯಡಿ ಆಯ್ಕೆಯಾದ ಕ್ಲಸ್ಟರ್ ಗಳಲ್ಲಿನ ರೈತರಿಗೆ ತರಬೇತಿ ನೀಡಲಾಗಿದ್ದು, ಯೋಜನಾ ಪ್ರದೇಶದ ರೈತರಿಗೆ ಪ್ರತಿ ಎಕರೆಗೆ ರೂ. 7000/- ಗಳನ್ನು ಪಾವತಿಸಲಾಗಿರುತ್ತದೆ. |
| ಉ) | ರೈತರು ಬೆಳೆಯುವ "ನೈಸರ್ಗಿಕ ಕೃಷಿ" ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗಿದೆಯೇ. | ರೈತರು ಉತ್ಪಾದಿಸಿದಂತಹ ಸಾವಯವ/ನೈಸರ್ಗಿಕ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಉತ್ತಮ ಮಾರುಕಟ್ಟೆ ಕೊಂಡಿಯನ್ನು ಕಲ್ಪಿಸಲು ಮತ್ತು ರೈತರು, ಖರೀದಿದಾರರು, ಮಾರಾಟಗಾರರು, ರಫ್ತುದಾರರಿಗೆ ವಿಫುಲ ಅವಕಾಶಗಳನ್ನು ಒದಗಿಸಲು ಕೃಷಿ ಇಲಾಖೆಯು ಸಾವಯವ ಮೇಳಗಳನ್ನು ರಾಜ್ಯದ ಎಲ್ಲಾ ಹಂತಗಳಲ್ಲಿಯೂ ವರ್ಷವಾರು ಆಯೋಜಿಸುತ್ತ ಬಂದಿದ್ದು, ರಾಷ್ಟ್ರೀಯ / ಅಂತರರಾಷ್ಟ್ರೀಯ ವಾಣಿಜ್ಯ ಮೇಳಗಳನ್ನು 2017, 2018, 2019 ಹಾಗೂ 2023 ನೇ ಸಾಲುಗಳಲ್ಲಿ ಆಯೋಜಿಸಿ ದೇಶಿಯ ಮತ್ತು ರಫ್ತು ಮಾರುಕಟ್ಟೆಯ ಸಂಪರ್ಕಗಳನ್ನು ಕಲ್ಪಿಸಲು ಮತ್ತು ಮೌಲ್ಯಸರಪಳಿ ಸೃಜಿಸಲು ಅನುವು ಮಾಡಿಕೊಡಲಾಗಿರುತ್ತದೆ. |

ಸಂಖ್ಯೆ: AGRI/259/ACT/2023

14/12

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

# ಅನುಬಂಧ

## ರಾಜ್ಯ ಕೃಷಿ/ತೋಟಗಾರಿಕಾ ವಿಶ್ವವಿದ್ಯಾಲಯಗಳಲ್ಲಿ ಕೈಗೊಂಡ ಪ್ರಾಯೋಗಿಕ ಪ್ರಯೋಗಗಳ ಶಿಫಾರಸ್ಸುಗಳು

- ಶೇ. 10 - 20 ರಷ್ಟು ಕಡಿಮೆ ಇಳುವರಿ ಕಂಡುಬಂದ ಕೆಲವು ಬೆಳೆಗಳು ಉತ್ತಮ ನಿವ್ವಳ ಆದಾಯದ ಕಾರಣದಿಂದ 20% ರಿಂದ 30% ರಷ್ಟು ಉತ್ಪಾದನಾ ವೆಚ್ಚ ಕಡಿಮೆಯಾಗಿದ್ದು ನೈಸರ್ಗಿಕ ಕೃಷಿಗೆ ಸೂಕ್ತವಾಗಿರುತ್ತವೆ.

- ದ್ವಿದಳ ಧಾನ್ಯ ಹಾಗೂ ಎಣ್ಣೆಕಾಳು ಬೆಳೆಗಳು ನೈಸರ್ಗಿಕ ಕೃಷಿ ಪದ್ಧತಿಗೆ ಸೂಕ್ತವಾಗಿರುತ್ತವೆ.

- ಸಿರಿಧಾನ್ಯ/ಕಬ್ಬು/ಮೆಕ್ಕೆಜೋಳ ಬೆಳೆಗಳೊಂದಿಗೆ ದ್ವಿದಳ ಧಾನ್ಯದ ಬೆಳೆಗಳ ಅಂತರ ಬೆಳೆ/ಮಿಶ್ರ ಬೆಳೆ ನೈಸರ್ಗಿಕ ಕೃಷಿ ಪದ್ಧತಿಗೆ ಸೂಕ್ತವಾಗಿರುತ್ತವೆ.

- ಪೇರಲ, ಸೀತಾಫಲ, ಗೋಡಂಬಿ, ಅಡಿಕೆ ಇತ್ಯಾದಿ ಹಣ್ಣು ಮತ್ತು ತೋಟಗಾರಿಕಾ ಬೆಳೆಗಳು ನೈಸರ್ಗಿಕ ಕೃಷಿ ಪದ್ಧತಿಗೆ ಸೂಕ್ತವಾಗಿರುತ್ತವೆ.

- ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಸಾವಯವ ಹೊದಿಕೆ (Mulching) ಕಡ್ಡಾಯವಾಗಿರುತ್ತದೆ.

- ರೈತರು ಕನಿಷ್ಠ ಒಂದು ಸ್ಥಳೀಯ ಹಸುವನ್ನು ಸಾಕಲು ಪ್ರೋತ್ಸಾಹಿಸಬೇಕು.

- ನೈಸರ್ಗಿಕ ಮತ್ತು ಸಾವಯವ ಕೃಷಿಗೆ ಅಗತ್ಯವಿರುವ ಎಲ್ಲಾ ಪರಿಕರಗಳನ್ನು ಸ್ಥಳೀಯವಾಗಿ ತಯಾರಿಸಲು ಮತ್ತು ಬಳಸಲು ರೈತರನ್ನು ಪ್ರೋತ್ಸಾಹಿಸಬೇಕು ಮತ್ತು ಮಾರುಕಟ್ಟೆಯಿಂದ ಖರೀದಿಸಬಾರದು.

- ಕ್ಷೇತ್ರ ಮಟ್ಟದಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳ ವಿವಿಧ ಯೋಜನೆಗಳ ಒಗ್ಗೂಡಿಸುವಿಕೆಯ ಮೂಲಕ ರಾಸಾಯನಿಕ ಮುಕ್ತ ಕೃಷಿ ಪದ್ಧತಿಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ.

- ಇಳುವರಿ, ಮಣ್ಣಿನ ಫಲವತ್ತತೆ ಮತ್ತು ಪೋಷಕಾಂಶಗಳ ನಿರ್ವಹಣೆಯನ್ನು ಕಾಪಾಡಿಕೊಳ್ಳಲು ನೈಸರ್ಗಿಕ ಮತ್ತು ಸಾವಯವ ಕೃಷಿಯ ಉತ್ತಮ ಅಭ್ಯಾಸಗಳನ್ನು ಸಂಯೋಜಿಸುವುದು ಉತ್ತಮವಾಗಿರುತ್ತದೆ.

- ನೈಸರ್ಗಿಕ ಕೃಷಿಯಲ್ಲಿ ಕೀಟಗಳು ಮತ್ತು ರೋಗಗಳ ನಿರ್ವಹಣೆ ಸವಾಲಿನದಾಗಿರುವ ಕಾರಣ, ಗಿಡಮೂಲಿಕೆ (ನೀಮಾಸ್ತ್ರ, ಬ್ರಹ್ಮಾಸ್ತ್ರ, ಅಗ್ನಿಯಾಸ್ತ್ರ, ಶುಂಟಿಯಾಸ್ತ್ರ, ದಶಪರ್ಣಿ ಕಷಾಯ ಇತ್ಯಾದಿ) ಗಳ ತಯಾರಿಕೆಯಲ್ಲಿ ಬಳಸುವ ಪದಾರ್ಥಗಳು, ಪ್ರಮಾಣ, concentration ಗಳನ್ನು ವೈಜ್ಞಾನಿಕವಾಗಿ standardize ಮಾಡುವ ಅವಶ್ಯವಿರುತ್ತದೆ.

****